# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :47 ಫ್ರಾ.ಸಾ. : 39**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಗೊಯ್ಡು ಗೊಂಡಾ |
| ತಂದೆಯ ಹೆಸರು | : | ಗೊಯ್ಡು ಗೊಂಡಾ |
| ವಯಸ್ಸು | : | 42 ವರ್ಷ |
| ಕೆಲಸ | : | ಮುಖ್ಯ ಪೇದೆ |
| ವಾಸ | : | ಭಟ್ಕಳ |

**ದಿನಾಂಕಃ 16.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಡಿಸೆಂಬರ್ 2014 ರಿಂದ ಜೂನ್ 2021 ರವರೆಗೆ ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 22.10.2018 ರಂದು ನಮ್ಮ ತನಿಖಾಧಿಕಾರಿಯಾದ ಚಾ.ಸಾ.69 ರವರು ಚಾ.ಸಾ.68/ಪಿಎಸ್ಐ ರವರಿಗೆ ಮತ್ತು ನನಗೆ ಹಾಗೂ ಚಾ.ಸಾ.44/ಸಿಪಿಸಿ-1675 ರವರಿಗೆ ಈ ಪ್ರಕರಣದ 2 ನೇ ಆರೋಪಿಯನ್ನು ಪತ್ತೆ ಹಚ್ಚಿ ತಂದು ಹಾಜರುಪಡಿಸುವಂತೆ ಮೌಖಿಕವಾಗಿ ಸೂಚಿಸಿರುತ್ತಾರೆ. ಅದರಂತೆ ನಾವು ಅದೇ ದಿನ ದಾಂಡೇಲಿಗೆ ಹೋಗಿ 2 ನೇ ಆರೋಪಿಯ ಮನೆಯ ಬಳಿ ಆತನಿಗಾಗಿ ಕಾಯುತ್ತಿದ್ದಾಗ ಬೆಳಗ್ಗಿನ ಜಾವ 2.30 ಗಂಟೆ ಸುಮಾರಿಗೆ 2 ನೇಆರೋಪಿತನ ಮನೆಯ ಮುಂದೆ ಒಬ್ಬ ವ್ಯಕ್ತಿ ಬರುತ್ತಿದ್ದು, ಆತನನ್ನು ತಡೆದು, ಆತನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ, ಆತ ತನ್ನ ಹೆಸರು ಮುಸ್ತಾಕ್ ಎಂದು ಹೇಳಿರುತ್ತಾನೆ ಹಾಗೂ ನಾವು ಆತನಿಗೆ ನಮ್ಮ ಪರಿಚಯ ತಿಳಿಸಿ ನಮ್ಮೊಂದಿಗೆ ಠಾಣೆಗೆ ಬರುವಂತೆ ಹೇಳಿ ಆತನನ್ನು ಠಾಣೆಗೆ ಕರೆದುಕೊಂಡು ಬಂದು ಬೆಳಗ್ಗಿನ ಜಾವ 5.30 ಗಂಟೆಗೆ ಚಾ.ಸಾ.69 ರವರ ಮುಂದೆ 2 ನೇ ಆರೋಪಿಯನ್ನು ಹಾಜರುಪಡಿಸಿರುತ್ತೇವೆ. ನಂತರ ಬೆಳಿಗ್ಗೆ 6.30 ಗಂಟೆಗೆ ಈ ಪ್ರಕರಣದ 3 ನೇ ಆರೋಪಿಯನ್ನು ಚಾ.ಸಾ.45/ಸಿಪಿಸಿ-952 ರವರು ಹಾಗೂ ಮತ್ತೊಬ್ಬ ಸಿಬ್ಬಂದಿಯಾದ ರಾಜೇಶ್ ನಾಯ್ಕ/ಸಿಪಿಸಿ-692 ರವರು ತಂದು ತನಿಖಾಧಿಕಾರಿಯ ಮುಂದೆ

ಹಾಜರುಪಡಿಸಿರುತ್ತಾರೆ. ಆನಂತರ ತನಿಖಾಧಿಕಾರಿಯವರು ಪಂಚರ ಹಾಗೂ ಮೃತನ ಸಂಬಂಧಿಕರ ಸಮಕ್ಷಮ ವಿಚಾರಣೆ ನಡೆಸಿ, ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ವಿಚಾರಣೆ ಸಮಯದಲ್ಲಿ 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಸೂಚನೆಯ ಮೇರೆಗೆ ಮೃತ ಪ್ರೇಮ್ ಕುಮಾರನನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದು ಹಾಗೂ ತಾವು ಕೊಲೆ ಮಾಡಿದ ಸ್ಥಳ ಹಾಗೂ ಶವವನ್ನು ಬಿಸಾಡಿದ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದು ಆನಂತರ ತನಿಖಾಧಿಕಾರಿಗಳು ಸಿಬ್ಬಂದಿಗಳನ್ನು, ಪಂಚರನ್ನು, ಮೃತರ ಸಂಬಂಧಿಕರನ್ನು, ವೈದ್ಯರನ್ನು ಮತ್ತು ಆರೋಪಿತರನ್ನು ಇಲಾಖೆಯ ವಾಹನಗಳಲ್ಲಿ ಕರೆದುಕೊಂಡು ಆರೋಪಿಗಳು ತೋರಿಸಿದಂತೆ ಉಳವಿಗೆ ಹೋಗಿರುತ್ತಾರೆ ಹಾಗೂ ನಮ್ಮ ಜೊತೆ ಒಂದು ಆಂಬುಲೆನ್ಸನ್ನು ಸಹ ಕರೆದುಕೊಂಡು ಹೋಗಿರುತ್ತೇವೆ.

2. ನಾವು ಉಳವಿಯ ಫಾರೆಸ್ಟ ಚೆಕ್ ಪೋಸ್ಟ ತಲುಪಿದಾಗ 2 ಮತ್ತು 3 ನೇ ಆರೋಪಿಗಳು ವಾಹನವನ್ನು ನಿಲ್ಲಿಸುವಂತೆ ಹೇಳಿದ್ದು, ಅದರಂತೆ ನಾವೆಲ್ಲ ಕೆಳಗೆ ಇಳಿದು 2 ಮತ್ತು 3 ನೇ ಆರೋಪಿತರು ತಾವು ಕೊಲೆ ಮಾಡಿದ ಹಾಗೂ ಶವ ಬಿಸಾಡಿದ ಸ್ಥಳಕ್ಕೆ ನಮ್ಮನ್ನು ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಸುಮಾರು 2 ½ ಕಿ.ಮಿ ಕಚ್ಚಾ ರಸ್ತೆಯಲ್ಲಿ ಹೋದ ನಂತರ ಪುನಃ 1 ½ ಕಿ.ಮಿ ಕಡಿದಾದ ರಸ್ತೆಯಲ್ಲಿ ಕರೆದುಕೊಂಡು ಹೋಗಿ ಒಂದು ಇಳಿಜಾರಿನ ಪ್ರದೇಶದಲ್ಲಿ ನಿಂತು ಅಲ್ಲಿಂದ ತಗ್ಗಿನ ಪ್ರದೇಶದಲ್ಲಿ ಬಿದ್ದಿದ್ದ ಒಂದು ಮನುಷ್ಯನ ಶವವನ್ನು ತೋರಿಸಿ ತಾವು ಕೊಲೆ ಮಾಡಿದ ಪ್ರೇಮ್ ಕುಮಾರನ ಶವ ಇದೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಆಗ ಸಮಯ ಮಧ್ಯಾಹ್ನ 12 ಗಂಟೆ ಆಗಿತ್ತು. ಆಗ ನಮ್ಮ ಜೊತೆ ಇದ್ದ ಮೃತನ ಅಣ್ಣನಾದ ರಾಜೇಶ್ ನಾಯರ್/ಚಾ.ಸಾ.19 ರವರು ಶವವನ್ನು ನೋಡಿ ಅದು ನನ್ನ ತಮ್ಮನ ಶವವಾಗಿರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ. ನಾವು ಶವವನ್ನು ನೋಡಿದಾಗ ಮೈ ಮೇಲೆ ಹರಿತವಾದ ಆಯುಧದಿಂದ ಕಡಿದ ಗಾಯಗಳಾಗಿದ್ದವು ಹಾಗೂ ಮೈ ಮೇಲೆ ಒಂದು ನಿಕ್ಕರ್ ಇದ್ದು, ಶವದ ಅಕ್ಕ ಪಕ್ಕದಲ್ಲಿ ಒಂದು ಬಿಳಿ ಬಣ್ಣದ ಬಟ್ಟೆ ತುಂಡು ಹಾಗೂ ಒಂದು ಹಸಿರು ಬಣ್ಣದ ಬಟ್ಟೆ ತುಂಡು ಇದ್ದವು. ನಂತರ ಅವುಗಳನ್ನು ತನಿಖಾಧಿಕಾರಿಯವರು ಜಪ್ತು ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುತ್ತಾರೆ.

3. ನಂತರ ತನಿಖಾಧಿಕಾರಿಯವರು ಸ್ಥಳದಲ್ಲಿಯೇ ಶವ ಪಂಚನಾಮೆಯನ್ನು ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರ ಸೂಚನೆಯ ಮೇರೆಗೆ ನಾನು ಶವ ಪಂಚನಾಮೆಯನ್ನು ನನ್ನ

ಹಸ್ತಾಕ್ಷರದಿಂದ ಬರೆದಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 14 ಗಂಟೆಯವರೆಗೆ ಮಾಡಿರುತ್ತಾರೆ. ಶವ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. ನಂತರ ತನಿಖಾಧಿಕಾರಿಯವರು ನಮ್ಮ ಜೊತೆ ಬಂದಿದ್ದ ವೈದ್ಯರಿಗೆ ಶವ ಪರೀಕ್ಷೆ ನಡೆಸಿ ವರದಿ ನೀಡುವಂತೆ ತಿಳಿಸಿದ್ದು, ಅದರಂತೆ ವೈದ್ಯರು ಸ್ಥಳದಲ್ಲಿಯೇ ಶವ ಪರೀಕ್ಷೆ ಮಾಡಿ ನಂತರ ಶವವನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ. ಆನಂತರ ನಾನು ತನಿಖಾಧಿಕಾರಿಯ ಸೂಚನೆಯಂತೆ ಶವವನ್ನು ಮೃತನ ಅಣ್ಣನಾದ ರಾಜೇಶ್ ನಾಯರ್ ರವರಿಗೆ ಬಿಟ್ಟುಕೊಟ್ಟಿರುತ್ತೇನೆ.

4. ಆನಂತರ ದಿನಾಂಕ 26.10.2018 ರಂದು ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿಯ ಸೂಚನೆ ಮೇರೆಗೆ ತನಿಖೆಗೆ ಸಹಾಯ ಮಾಡಿರುತ್ತೇನೆ. ಆನಂತರ ದಿನಾಂಕ 31.10.2018 ರಂದು ಈ ಪ್ರಕರಣದ ಶವ ಪರೀಕ್ಷೆ ಮಾಡಿದ ವೈದ್ಯರು ಮೃತನ ವಿಸೆರಾ ಹಾಗೂ ಶವ ಬಿದ್ದ ಜಾಗದಲ್ಲಿ ಸಂಗ್ರಹಿಸಿದ ವಸ್ತುಗಳನ್ನು ಪರೀಕ್ಷೆ ಕುರಿತು ಸೀಲ್ ಮಾಡಿ ನಂತರ ನನಗೆ ನೀಡಿದ್ದು, ನಾನು ಅದನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು, ಸದರಿ ವಸ್ತುಗಳನ್ನು ತನಿಖಾಧಿಕಾರಿಯು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.57 ಎಂದು ಗುರುತಿಸಲಾಗಿರುತ್ತದೆ. ದಿನಾಂಕ 04.12.2018 ರಂದು ದಸ್ತಗಿರಿ ಮಾಡಿದ 1 ನೇ ಆರೋಪಿಯ ಅಂಗ ಶೋಧನೆ ಮಾಡುವ ಕಾಲಕ್ಕೆ ಪಂಚನಾಮೆ ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರು ಹೇಳಿದಂತೆ ನಾನು ಪಂಚನಾಮೆಯನ್ನು ಗಣಕೀಕರಣ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.62 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.62(ಬಿ) ಎಂದು ಗುರುತಿಸಲಾಯಿತು. ದಿನಾಂಕ 06.12.2018 ರಂದು 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದಂತೆ ತನಿಖಾಧಿಕಾರಿಯು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದು, ನಾನು ಲಾಪ್ ಟಾಪ್ ಮತ್ತು ಪ್ರಿಂಟರಿನೊಂದಿಗೆ ಸ್ಥಳಕ್ಕೆ ಹೋಗಿದ್ದು, 1 ನೇಆರೋಪಿಯು ನಮ್ಮನ್ನು ದಾಂಡೇಲಿಯ ಮೃತ್ಯುಂಜಯ ಮಠದ ಹತ್ತಿರದ ರಸ್ತೆಯ ಬದಿಯ ಒಂದು ಸ್ಥಳವನ್ನು ತೋರಿಸಿದ್ದು, ಅಲ್ಲಿ ತನಿಖಾಧಿಕಾರಿಯು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ತನಿಖಾಧಿಕಾರಿ ಹಾಗೂ

ಪಂಚರು ಸೂಚಿಸಿದಂತೆ ಪಂಚನಾಮೆಯನ್ನು ಗಣಕೀಕರಣ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.59 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.59(ಸಿ) ಎಂದು ಗುರುತಿಸಲಾಯಿತು.

5. ಅನಂತರ 1 ನೇ ಆರೋಪಿಯು ತಪ್ಪಿಸಿಕೊಳ್ಳಲು ಉಪಯೋಗಿಸಿದ ವಾಹನವನ್ನು ತಂದು ಹಾಜರುಪಡಿಸುವಂತೆ ಅದರ ವಾರಸುದಾರರಾದ ಚಾ.ಸಾ.36 ರವರಿಗೆ ತನಿಖಾಧಿಕಾರಿಯು ಸೂಚಿಸಿದ ಮೇರೆಗೆ ದಿನಾಂಕ 07.12.2018 ರಂದು ಚಾ.ಸಾ.36 ರವರು ವಾಹನ ಸಂಖ್ಯೆ ಕೆಎ–19/ಎಂ.ಎಫ್–9020 ನ್ನು ಠಾಣೆಗೆ ತಂದು ಹಾಜರುಡಿಸಿದ್ದು, ಸದರಿ ಕಾರನ್ನು ತನಿಖಾಧಿಕಾರಿಯು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿದ್ದು, ಸದರಿ ಜಪ್ತುಪಂಚನಾಮೆಯನ್ನು ತನಿಖಾಧಿಕಾರಿ ಹಾಗೂ ಪಂಚರು ಹೇಳಿದಂತೆ ಗಣಕೀಕರಣ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.72 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.72(ಸಿ) ಎಂದು ಗುರುತಿಸಲಾಯಿತು. ಅದೇ ದಿನ 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ ಸಂಚು ರೂಪಿಸಲು ಬಳಸಿದ ಕಾರನ್ನು ತೋರಿಸುವುದಾಗಿ ತಿಳಿಸಿದಂತೆ, ತನಿಖಾಧಿಕಾರಿಯು ನನ್ನನ್ನು ತಮ್ಮ ಜೊತೆ ಕರೆದುಕೊಂಡು ಹೋಗಿದ್ದು, 1 ನೇ ಆರೋಪಿಯು ನಮ್ಮನ್ನು ಅಲಿಗದ್ದದ ಶಿಪ್ಪಿಂಗ್ ಕಚೇರಿಯ ಬಳಿ ಕರೆದುಕೊಂಡು ಹೋಗಿ ಕಚೇರಿಯ ಮುಂದೆ ನಿಲ್ಲಿಸಿಟ್ಟ ವೋಕ್ಸ ವ್ಯಾಗನ್ ಕಾರನ್ನು ತೋರಿಸಿದ್ದು, ಸದರಿ ಕಾರನ್ನು ತನಿಖಾಧಿಕಾರಿಯು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ. ಅಲ್ಲಿ ತನಿಖಾಧಿಕಾರಿ ಹಾಗೂ ಪಂಚರು ಸೂಚಿಸಿದಂತೆ ಸದರಿ ಪಂಚನಾಮೆಯನ್ನು ಗಣಕೀಕರಣ ಮಾಡಿರುತ್ತೇನೆ. ಆ ಪಂಚನಾಮೆಯನ್ನು ಈಗಾಗಲೇ ನಿ.ಪಿ.74 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.74(ಬಿ) ಎಂದು ಗುರುತಿಸಲಾಯಿತು.

6. ಅದಲ್ಲದೆ ದಿನಾಂಕ 27.10.2018 ಹಾಗೂ 28.10.2018 ರಂದು ತನಿಖಾಧಿಕಾರಿಯ ನಡೆಸಿದ ತನಿಖೆಗೆ ಸಹಾಯ ಮಾಡಿರುತ್ತೇನೆ. ಮೃತನ ಶವವನ್ನು ನಿ.ಪಿ.14 ಫೋಟೊದಲ್ಲಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.13 ಫೋಟೊದಲ್ಲಿ 3 ನೇ ಆರೋಪಿಯು ಶವ ತೋರಿಸುತ್ತಿರುವುದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.60 ಮತ್ತು 61 ರಲ್ಲಿ 1 ನೇ ಆರೋಪಿಯು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ ಎಂದು ನೋಡಿ

ಗುರುತಿಸಿರುತ್ತಾರೆ. ನಿ.ಪಿ 63 ರಲ್ಲಿ ಫೋಟೊ 1 ನೇ ಆರೋಪಿಯ ಅಂಗ ಜಪ್ತು ಪಂಚನಾಮೆಯ ಫೋಟೊ ಆಗಿರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ. ನಿ.ಪಿ 73 ಫೋಟೊದಲ್ಲಿ 1 ನೇ ಆರೋಪಿಯು ತಲೆ ಮರೆಸಿಕೊಳ್ಳಲು ಬಳಸಿದ ಕಾರು ಎಂದು ನೋಡಿ ಗುರುತಿಸಿರುತ್ತಾರೆ. ನಿ.ಪಿ 75 ಫೋಟೊ 1 ನೇ ಆರೋಪಿಯು ಸಂಚು ರೂಪಿಸಲು ಬಳಸಿದ ಕಾರು ಎಂದು  ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ  ತನಿಖಾಧಿಕಾರಿಯ ಮುಂದೆ ಹೇಳಿಕೆ ಹಾಗೂ ಮರು ಹೇಳಿಕೆಗಳನ್ನು ನೀಡಿರುತ್ತೇನೆ. ತನಿಖೆಯಿಂದ 1 ನೇ ಆರೋಪಿ ಹಾಗೂ ಮೃತ ಪ್ರೇಮ್ ಕುಮಾರ್ ನಡುವೆ ಶಿಪ್ಪಿಂಗ್ ವ್ಯವಹಾರ ಸಂಬಂಧ ವೈಮನಸ್ಸು ಇದ್ದುದ್ದರಿಂದ 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಲು 2 ಮತ್ತು 3 ನೇ ಆರೋಪಿಯೊಂದಿಗೆ ಸಂಚು ರೂಪಿಸಿ ಕೊಲೆ ಮಾಡಿಸಿರುತ್ತಾನೆ ಹಾಗೂ 2 ಮತ್ತು 3 ನೇ ಆರೋಪಿಗಳು 1 ನೇ ಆರೋಪಿಯ ಸೂಚನೆಯಂತೆ ಪ್ರೇಮ್ ಕುಮಾರನನ್ನು ಕೊಲೆ ಮಾಡಿರುತ್ತಾರೆ ಮತ್ತು  4 ಮತ್ತು 5 ನೇ ಆರೋಪಿಗಳು ಪ್ರೇಮ್ ಕುಮಾರನನ್ನು 1 ರಿಂದ 3 ನೇ ಆರೋಪಿತರು ಸೇರಿ ಕೊಲೆ ಮಾಡಿದ ವಿಚಾರ ತಿಳಿದಿದ್ದರೂ ಸಹ, 1 ನೇ ಆರೋಪಿಯು ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ 1 ರಿಂದ 5 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ ವಕೀಲರಿಂದ**

7. ದಿನಾಂಕ 22.10.2018 ರಂದು ಸಂಜೆ 5.30 ಗಂಟೆಗೆ ನಾವು ಕಾರವಾರದಿಂದ ಹೊರಟು ದಾಂಡೇಲಿ ತಲುಪಿದಾಗ ರಾತ್ರಿ 8.30 ರಿಂದ 9.00 ಗಂಟೆ ಆಗಿತ್ತು. ದಾಂಡೇಲಿಗೆ ಹೋದ ನಂತರ ನಾವು 2 ನೇ ಆರೋಪಿಯ ಮನೆಯ ಒಳಗೆ ಹೋಗಿ 2 ನೇ ಆರೋಪಿಯನ್ನು ತಪಾಸಣೆ ಮಾಡಿಲ್ಲ. ರಾತ್ರಿ 9 ಗಂಟೆಯಿಂದ ಬೆಳಗ್ಗಿನ ಜಾವ 2.30 ರವರೆಗೆ ನಾವು ಅದೇ ಏರಿಯಾದಲ್ಲಿ ಸುತ್ತಾಡುತ್ತಿದ್ದೆವು ಅಂದರೆ 2 ನೇ ಆರೋಪಿಯ ಮನೆಯ ಹತ್ತಿರ ಇರುವ ಮಸೀದಿಯ ಬಳಿ ಕಾಯುತ್ತಿದ್ದೆವು. ಮಸೀದಿಯ ಬಳಿಯಿಂದ 2 ನೇ ಆರೋಪಿಯ ಮನೆಯು ನೇರವಾಗಿ ಕಾಣುತ್ತಿತ್ತು. ಸದರಿ ಮಸೀದಿಯ ಹೆಸರು ನನಗೆ ಹೇಳಲು ಬರುವುದಿಲ್ಲ. ಆ ದಿನ ರಾತ್ರಿ 2 ನೇ ಆರೋಪಿಯ ಬಳಿ ಹೋದಾಗ ಆತ ಓಡಿ ಹೋಗಲು ಪ್ರಯತ್ನಿಸಿದ್ದಾನ ಎಂದರೆ ಸಾಕ್ಷಿಯು ನಾವು ಆತನನ್ನು ಸುತ್ತುವರಿದಿದ್ದರಿಂದ ಆತ ಗಾಬರಿಗೊಂಡಿದ್ದ ಎಂದು

ನುಡಿಯುತ್ತಾರೆ. 2 ನೇ ಆರೋಪಿಯನ್ನು ನಾವು ವಶಕ್ಕೆ ಪಡೆದ ಬಗ್ಗೆ ನಾನು ಆತನ ಮನೆಯರಿಗೆ ತಿಳಿಸಿರುವುದಿಲ್ಲ. ಆದರೆ ನಮ್ಮ ಜೊತೆ ಇದ್ದ ಪಿಎಸ್‌ಐ ರವರು ತಿಳಿಸಿದ್ದಾರ ಅಥವಾ ಇಲ್ಲವೊ ನನಗೆ ಗೊತ್ತಿಲ್ಲ. ನಾವು 2 ನೇ ಆರೋಪಿಯನ್ನು ಸ್ಥಳದಲ್ಲಿಯೇ ವಿಚಾರಣೆ ಮಾಡಲು ಸುಮಾರು 15 ನಿಮಿಷ ಆಗಿರುತ್ತದೆ. ನಾವು ಹೋದಂತಹ ವಾಹನವನ್ನು 2 ನೇ ಆರೋಪಿಯ ಮನೆಯಿಂದ ಸುಮಾರು 200 ಮೀಟರ್ ದೂರದಲ್ಲಿ ನಿಲ್ಲಿಸಿರುತ್ತೇವೆ. ನಾವು ದಾಂಡೇಲಿ ಬಿಡಲು 3 ಗಂಟೆ ಆಗಿತ್ತು ಎಂದರೆ ಸಾಕ್ಷಿಯು 2.45 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ನಾವು 2 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಾಗ ಠಾಣೆಯಲ್ಲಿ ಎಸ್.ಹೆಚ್.ಒ, ಸೆಂಟ್ರಿಗಳು ಹಾಗೂ ತನಿಖಾಧಿಕಾರಿ ಇದ್ದರು. ಆರೋಪಿಯನ್ನು ಹಾಜರುಪಡಿಸಿದ ನಂತರ ನಾವು ಠಾಣೆಯಲ್ಲಿಯೇ ಇದ್ದೆವು. ಬೆಳಗ್ಗಿನ ಜಾವ 5.30 ರಿಂದ 6.30 ರವರೆಗೆ 2 ನೇ ಆರೋಪಿಯನ್ನು ತನಿಖಾಧಿಕಾರಿಗಳು ವಿಚಾರಣೆ ಮಾಡಿರುತ್ತಾರೆ. ಆದರೆ ಹೇಳಿಕೆ ಪಡೆದುಕೊಂಡಿರುವುದಿಲ್ಲ. 3 ನೇ ಆರೋಪಿಯನ್ನು ಸುಮಾರು ½ ತಾಸು ತನಿಖಾಧಿಕಾರಿಗಳು ವಿಚಾರಣೆ ಮಾಡಿರುತ್ತಾರೆ. ನಾವು ದಾಂಡೇಲಿಗೆ ಹೋಗಿಲ್ಲ ಹಾಗೂ 2 ನೇ ಆರೋಪಿಯನ್ನು ಪತ್ತೆ ಹಚ್ಚಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಯವರು 2 ಮತ್ತು 3 ನೇ ಆರೋಪಿಗೆ ಕರೆ ಮಾಡಿ ತಿಳಿಸಿದ ಮೇರೆಗೆ ಅವರೇ ಸ್ವತಃ ಠಾಣೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ.

8. 2 ಮತ್ತು 3 ನೇ ಆರೋಪಿತರ ವಿಚಾರಣೆಯನ್ನು ತನಿಖಾಧಿಕಾರಿಗಳು ತನಿಖಾ ಸಹಾಯಕರ ಕೊಠಡಿಯಲ್ಲಿ ಮಾಡಿರುತ್ತಾರೆ. ತನಿಖಾಧಿಕಾರಿಯವರ ಕೊಠಡಿಯಲ್ಲಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ. 2 ಮತ್ತು 3 ನೇ ಆರೋಪಿತರ ಸ್ವ-ಖುಷಿ ಹೇಳಿಕೆಗಳನ್ನು ಬೆಳಿಗ್ಗೆ 8:00 ರಿಂದ 9:30 ಘಂಟೆಯವರೆಗೆ ಮಾಡಿಕೊಳ್ಳಲಾಯಿತು. ಆರೋಪಿತರ ಸ್ವ-ಖುಷಿ ಹೇಳಿಕೆ ಕಾಲಕ್ಕೆ ಮೃತನ ಅಣ್ಣ ರಾಜೇಶ ನಾಯರ ಹಾಗೂ ಮೃತನ ಹೆಂಡತಿಯ ತಮ್ಮನಾದ ಚಾಸಾ-20 ಠಾಣೆಯಲ್ಲಿ ಬಂದಿದ್ದರು. ಆ ಸಮಯದಲ್ಲಿ ಠಾಣೆಗೆ ಬೇರೆ ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರ ಸ್ವ-ಖುಷಿ ಹೇಳಿಕೆ ಕಾಲದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಚಾಸಾ-44/ಸಿಪಿಸಿ-1675, ಚಾಸಾ-45/ಸಿಪಿಸಿ-952, ಸಿಪಿಸಿ -662/ರಾಜೇಶ ನಾಯ್ಕು, ಚಾಸಾ-43/ಸಿಪಿಸಿ-737, ಪಿಎಸ್‌ಐ ನವೀನ್ ನಾಯ್ಕು, ತನಿಖಾಧಿಕಾರಿಯಾದ ಚಾಸಾ-69 ರವರು ಹಾಜರು ಇದ್ದೆವು. ಮೊದಲು 2 ನೇ ಆರೋಪಿತನ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು, ನಂತರ 3 ನೇ ಆರೋಪಿತನ

ಸ್ವ-ಖುಷಿ ಹೇಳಿಕೆಯನ್ನು ಪಡೆಯಲಾಯಿತು. ಸದರಿಯವರ ಸ್ವ-ಖುಷಿ ಹೇಳಿಕೆಗಳನ್ನು ಠಾಣೆಯಲ್ಲಿ ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಆರೋಪಿತರನ್ನು ತನಿಖಾ ಸಹಾಯಕರ ಕೊಠಡಿಯನ್ನು ಬಿಟ್ಟು ಬೇರೆ ಎಲ್ಲಿಯೂ ವಿಚಾರಣೆ ಮಾಡಿರುವುದಿಲ್ಲ. ನಮ್ಮ ಮುಂದೆ ಆಗಲಿ, ಪಂಚರ ಮುಂದೆ ಆಗಲಿ ಹಾಗೂ ಮೃತರ ಸಂಬಂಧಿಕರ ಮುಂದೆ ಆಗಲಿ ಆರೋಪಿತರ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

9. 2 ಮತ್ತು 3 ನೇ ಆರೋಪಿತರ ಸ್ವ-ಖುಷಿ ಹೇಳಿಕೆ ಮೇರೆಗೆ ದಿನಾಂಕಃ 23.10.2018 ರಂದು ಘಟನಾ ಸ್ಥಳಕ್ಕೆ ಹೋಗುವ ಸಮಯದಲ್ಲಿ ಇಲಾಖೆಯ ಎರಡು ವಾಹನಗಳಲ್ಲಿ ಹಾಗೂ ಒಂದು ಆ್ಯಂಬುಲೆನ್ಸನಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಮೊದಲನೆಯದಾಗಿ ಬಸ್ಸಿನಲ್ಲಿ 9 ಜನ ಸಿವಿಲ್ ಸಿಬ್ಬಂದಿಗಳು, 7 ಜನ ಡಿ.ಎ.ಆರ್ ಸಿಬ್ಬಂದಿಗಳು, ಇಬ್ಬರು ಪಂಚರು, ಇಬ್ಬರು ಮೃತನ ಸಂಬಂಧಿಕರು ಹಾಗೂ ತನಿಖಾಧಿಕಾರಿಗಳು ಹೋಗಿರುತ್ತೇವೆ. ಜೀಪ್‌ನಲ್ಲಿ ವಾಹನ ಚಾಲಕ ಮಾತ್ರ ಇದ್ದನು. ಆ್ಯಂಬುಲೆನ್ಸನಲ್ಲಿ ಆಸ್ಪತ್ರೆಯ ಒಬ್ಬರು ವೈದ್ಯರು, ಇಬ್ಬರು ಸಿಬ್ಬಂದಿಗಳು ಹಾಗೂ ಒಬ್ಬ ಚಾಲಕ ಇದ್ದರು. ಠಾಣೆಯ ಬಳಿ ಆ್ಯಂಬುಲೆನ್ಸ ಬಂದಿರುತ್ತದೆ. ನಾವು ಸ್ಥಳಕ್ಕೆ ಹೋಗುವ ಮುಂದುಗಡೆ ನಮ್ಮ ಇಲಾಖೆಯ ವಾಹನವಾದ ಬಸ್, ನಂತರ ಜೀಪ್ ಹಾಗೂ ಆನಂತರ ಆ್ಯಂಬುಲೆನ್ಸ ಇತ್ತು. ಠಾಣೆಯಿಂದ ಆಕಳಗವಿ ಚೆಕ್ ಪೋಸ್ಟಗೆ ಸುಮಾರು 55 ಕಿ.ಮೀ ದೂರ ಪ್ರಯಾಣ ಮಾಡಿದ್ದೆವು. ನಾವು ಆಕಳಗವಿ ಚೆಕ್ ಪೋಸ್ಟ ತಲುಪಿದಾಗ ಸುಮಾರು 11.30 ರಿಂದ 11.45 ಘಂಟೆ ಆಗಿತ್ತು. ಚೆಕ್ ಪೋಸ್ಟನಿಂದ 2½ ಕಿ.ಮೀ ನಡೆದು ಹೋದ ದಾರಿ ಸುಮಾರು 12 ರಿಂದ 15 ಅಡಿ ಅಗಲ ಇತ್ತು. ಆದರೆ ನಾವು ಹೋದಂತಹ ದಿನಗಳಲ್ಲಿ ಮಳೆಗಾಲವಾದ್ದರಿಂದ ರಸ್ತೆ ಕೆಸರಿನಿಂದ ಕೂಡಿ ಹಾಳಾಗಿತ್ತು ಎಂದು ನುಡಿಯುತ್ತಾರೆ.

10. ನಾವು ಆಕಳಗವಿ ಚೆಕ್ ಪೋಸ್ಟನಿಂದ ಅರಣ್ಯ ಪ್ರದೇಶಕ್ಕೆ ನಡೆದುಕೊಂಡು ಹೋಗುವಾಗ ನಮ್ಮ ಜೊತೆ ಇಬ್ಬರು ಅರಣ್ಯ ಸಿಬ್ಬಂದಿಯವರು ಸಹಾ ಬಂದಿದ್ದರು. ಅವರನ್ನು ಬಿಟ್ಟು ಬೇರೆ ಯಾರು ಬಂದಿರಲಿಲ್ಲ. 2½ ಕಿ.ಮೀ ನಡೆದು ಹೋಗಲು ಸುಮಾರು 15 ರಿಂದ 20 ನಿಮಿಷ ಸಮಯವಾಗುತ್ತದೆ. ನಂತರದ 1 ½ ಕಿ.ಮೀ ಕಾಲು ದಾರಿಯಲ್ಲಿ ಜನ ಓಡಾಡಿದ ಯಾವುದೇ ಗುರುತು ಇರಲಿಲ್ಲ. ಸದರಿ 1 ½ ಕಾಲು ದಾರಿಯು ದಟ್ಟವಾದ ಅರಣ್ಯ ಪ್ರದೇಶದಿಂದ ಕೂಡಿದ ಕಾಲು ದಾರಿಯಾಗಿರುತ್ತದೆ. ಸದರಿ ಕಾಲು ದಾರಿಯನ್ನು ಕ್ರಮಿಸಲು 10 ರಿಂದ 15 ನಿಮಿಷ ಸಮಯ ಆಗಿರುತ್ತದೆ. ಇಳಿಜಾರು ಪ್ರದೇಶದಲ್ಲಿ ನಾವು ನಿಂತ ಜಾಗದಿಂದ ಶವ ಬಿದ್ದ ತಗ್ಗಿನ

ಪ್ರದೇಶವು ಸುಮಾರು 100 ಅಡಿ ಆಳ ಇತ್ತು ಹಾಗೂ ನಾವು ನಿಂತ ಜಾಗದಿಂದ ಶವ ಕಾಣುತ್ತಿತ್ತು. ಶವ ಬಿದ್ದ ಸ್ಥಳಕ್ಕೆ ನಾವು ಒಟ್ಟೂ 8 ರಿಂದ 10 ಜನ ಹೋಗಿದ್ದೇವು, ಅಂದರೆ ತನಿಖಾಧಿಕಾರಿ, ಎರಡು ಜನ ಪಂಚರು, 2 ಮತ್ತು 3 ನೇ ಆರೋಪಿತರು, ನಾನು, ಚಾಸಾ–43 /ಮಂಜುನಾಥ ಜಿ ಎನ್, ಆರೋಪಿತರ ಭದ್ರಿಕೆಯ ಎರಡು ಜನ ಸಿಬ್ಬಂದಿಗಳು ಇದ್ದರು. ನಾವು ಸ್ಥಳಕ್ಕೆ ಹೋದಾಗ ಶವವು ಸ್ವಲ್ಪ ಕೊಳೆತ ಸ್ಥಿತಿಯಲ್ಲಿತ್ತು. ಶವದ ತಲೆಯ ಮೇಲೆ, ಕುತ್ತಿಗೆಯ ಮೇಲೆ, ಬಲ ಭುಜದ ಮೇಲೆ, ಕೈಗಳ ಮೇಲೆ, ಹೊಟ್ಟೆಯ ಮೇಲೆ, ಸೊಂಟದ ಬಳಿ ಹಾಗೂ ಕಾಲಿನ ಮೇಲೆ ಗಾಯಗಳು ಇದ್ದವು.

11. ನಿಪಿ–17 ಫೋಟೋ ನೋಡಿದಾಗ ಶವದ ಮೈಮೇಲೆ ಗಾಯಗಳು ಕಾಣುವುದಿಲ್ಲ ಎಂದರೆ ಸರಿಯಲ್ಲ. ಶವ ಬಿದ್ದ ಸ್ಥಳದಿಂದ 3–4 ಅಡಿ ದೂರದಲ್ಲಿ ಮೇಲೆ ಹೇಳಿದ ಬಟ್ಟೆ ಚೂರುಗಳು ಬಿದಿದ್ದವು. ಶವ ಬಿದ್ದ ಸ್ಥಳದಲ್ಲಿ ನನಗೆ ಯಾವುದೇ ರಕ್ತದ ಕಲೆಗಳು ಕಂಡು ಬಂದಿರಲಿಲ್ಲ. ಶವ ಪಂಚನಾಮೆಯನ್ನು ಸುಮಾರು 12.30 ಘಂಟೆಯಿಂದ 14.00 ಘಂಟೆಯವರೆಗೆ ಮಾಡಲಾಯಿತು. ಶವ ತನಿಖಾ ಕಾಲಕ್ಕೆ ಶವವನ್ನು ಸಂಪೂರ್ಣವಾಗಿ ತಿರುಗಿಸಿ ನೋಡಿ, ನಂತರ ಶವ ತನಿಖೆ ಮಾಡಲಾಯಿತು. ಶವದ ಮೈಮೇಲೆ ಇದ್ದ ಗಾಯಗಳಿಗೆ ಸಂಬಂಧಿಸಿದಂತೆ ಫೋಟೋ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಸಂಪೂರ್ಣ ಶವದ ಫೋಟೋವನ್ನು ತೆಗೆದಿರುತ್ತಾರೆ. ಶವವನ್ನು 20 ಅಡಿ ಮೇಲಕ್ಕೆ ತಂದು, ಆ ನಂತರ ವೈದ್ಯರು ಶವ ಪರೀಕ್ಷೆಯನ್ನು ಮಾಡಿರುತ್ತಾರೆ. ಆ ದಿನ ವೈದ್ಯರು ಶವ ಪರೀಕ್ಷೆಯನ್ನು ಸುಮಾರು ಒಂದು ಘಂಟೆ ಕಾಲ ಮಾಡಿರುತ್ತಾರೆ.

(ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ